# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 524 |
| ಸದಸ್ಯರ ಹೆಸರು | : | ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 08-12-2023 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರು ಬೆಳೆಯುವ ಫಸಲಿಗೆ ಯಾವ ಆಧಾರದ ಮೇಲೆ ಬೆಂಬಲ ಬೆಲೆ ನಿಗದಿಪಡಿಸಲಾಗುತ್ತಿದೆ ಮತ್ತು ರೈತರು ಬೆಳೆಯುವ ಯಾವ ಫಸಲಿಗೆ ಯಾವ ಯಾವ ಮಾನದಂಡ ಉಪಯೋಗಿಸಲಾಗುತ್ತಿದೆ; ಹಾಗೂ ಪ್ರಸ್ತುತದಲ್ಲಿ ಯಾವ ಫಸಲುಗಳಿಗೆ ಬೆಂಬಲ ಬೆಲೆ ನಿಗಧಿಪಡಿಸಲಾಗಿದೆ; (ಪೂರ್ಣ ಮಾಹಿತಿ ನೀಡುವುದು). | ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸುತ್ತದೆ. ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸುವ ಪೂರ್ವದಲ್ಲಿ, ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (Commission on Agricultural Costs and Prices (CACP)) ಪ್ರಮುಖ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳ ರಾಜ್ಯವಾರು ಉತ್ಪಾದನಾ ವೆಚ್ಚದ ಮಾಹಿತಿಯನ್ನು ಕ್ರೋಢೀಕರಿಸಿ, ಅವುಗಳ ಆಧಾರದ ಮೇಲೆ ಉತ್ಪಾದನಾ ವೆಚ್ಚ (ರೈತ ಭರಿಸಿದ ಎಲ್ಲಾ ವೆಚ್ಚಗಳು ಮತ್ತು ಕುಟುಂಬದ ಶ್ರಮ) ಹಾಗೂ ಉತ್ಪಾದನಾ ವೆಚ್ಚದ ಶೇ.50 ರಷ್ಟು ಸೇರಿಸಿ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಈ ಆಧಾರದ ಮೇಲೆ ಕೇಂದ್ರ ಸರ್ಕಾರವು ಮುಂಗಾರು / ಹಿಂಗಾರು ಹಂಗಾಮಿಗೆ ಮುಂಚಿತವಾಗಿ ಬೆಂಬಲ ಬೆಲೆಯನ್ನು ಘೋಷಿಸುತ್ತದೆ.<br><br>2023-24ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆಗಳಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ವಿವರಗಳನ್ನು ಅನುಬಂದದಲ್ಲಿ ಒದಗಿಸಲಾಗಿದೆ. |
| ಆ) | ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆ ನಿಗಧಿ ಮಾಡುವ ಸಂದರ್ಭದಲ್ಲಿ ರೈತರು ಬೆಳೆಯುವ ಫಸಲಿಗೆ ಉಪಯೋಗಿಸುವ ಬೀಜದ ವೆಚ್ಚ, ಗೊಬ್ಬರ-ಗೂಡುಗಳಿಗೆ ತಗಲುವ ವೆಚ್ಚ, ರೈತ ಕುಟುಂಬದ ದುಡಿಮೆ ವೆಚ್ಚ ಸೇರಿದಂತೆ ಮಾರುಕಟ್ಟೆ ಬೆಲೆ ಆಧಾರದ ಮೇಲೆ ನಿಗಧಿಪಡಿಸಲು ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಒತ್ತಾಯಿಸುವುದೇ; ಹಾಗಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು; | ಹೌದು.<br><br>ರಾಜ್ಯದಲ್ಲಿ ಕೃಷಿ ಬೆಲೆ ಆಯೋಗವು ರಾಜ್ಯದ ಪ್ರಮುಖ ಕೃಷಿ / ತೋಟಗಾರಿಕಾ ಉತ್ಪನ್ನಗಳ ಉತ್ಪಾದನಾ ವೆಚ್ಚವನ್ನು ಕೃಷಿ ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ರೈತರ ಸಹಭಾಗಿತ್ವದಲ್ಲಿ ವೈಜ್ಞಾನಿಕವಾಗಿ ಲೆಕ್ಕಾಚಾರ ಹಾಕಿ (ರೈತರು ಬೆಳೆಗಳಿಗೆ ಉಪಯೋಗಿಸುವ ಬೀಜ, ಗೊಬ್ಬರ, ಪೀಡೆನಾಶಕಗಳು ಮತ್ತು ಇತರೆ ಪರಿಕರಗಳ ವೆಚ್ಚ, ಎತ್ತು/ಯಂತ್ರಗಳ ಬಳಕೆಗೆ ತಗಲುವ ವೆಚ್ಚ, ಮಾನವ ಶ್ರಮ ಮತ್ತು ರೈತ ಕುಟುಂಬದ ದುಡಿಮೆ ವೆಚ್ಚ ಸೇರಿದಂತೆ) ಸರ್ಕಾರಕ್ಕೆ ವರದಿ ಸಲ್ಲಿಸುತ್ತಿದ್ದು, ಸದರಿ ಉತ್ಪಾದನಾ ವೆಚ್ಚ ಆಧರಿಸಿ, ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆ ನಿಗಧಿಪಡಿಸಲು ಶಿಫಾರಸ್ಸು ಮಾಡಲಾಗುತ್ತದೆ. |

| | | |
|---|---|---|
| ಇ) | ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ರೈತರು ಬೆಳೆಯುವ ಎಲ್ಲಾ ಫಸಲುಗಳಿಗೆ ಬೆಂಬಲ ಬೆಲೆ ನಿಗಧಿಪಡಿಸಲು ಒಂದು ಕಾನೂನು ಹೊರತರುವಂತೆ ಇತರೆ ರಾಜ್ಯಗಳ ರೀತ್ಯಾ ಒತ್ತಾಯಿಸಿ, ಪ್ರಸ್ತಾವನೆಯನ್ನು ಕಳುಹಿಸಲಾಗಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು? | ರೈತರು ಬೆಳೆಯುವ ಎಲ್ಲಾ ಫಸಲುಗಳಿಗೆ ಬೆಂಬಲ ಬೆಲೆ ನಿಗಧಿಪಡಿಸಲು ಒಂದು ಕಾನೂನು ಹೊರತರುವಂತೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುವುದಿಲ್ಲ. |

ಸಂಖ್ಯೆ: AGRI/244/ACT/2023

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು.**

## ಅನುಬಂಧ

(ಕರ್ನಾಟಕ ವಿಧಾನ ಪರಿಷತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 497 (524))

**2023-24ನೇ ಸಾಲಿನಲ್ಲಿ ವಿವಿಧ ಬೆಳೆಗಳಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ವಿವರ**

| ಕ್ರ.ಸಂ. | ಬೆಳೆ | ಬೆಂಬಲ ಬೆಲೆ (ಪ್ರತಿ ಕ್ವಿಂಟಾಲ್ ಗೆ ರೂ.ಗಳಲ್ಲಿ) |
|---|---|---|
| **ಮುಂಗಾರು ಹಂಗಾಮಿನ ಬೆಳೆಗಳು:** | | |
| 1 | ಭತ್ತ- ಸಾಮಾನ್ಯ | 2183-00 |
| | ಭತ್ತ- ಗ್ರೇಡ್ 'ಎ' | 2203-00 |
| 2 | ಮುಸುಕಿನ ಜೋಳ | 2090-00 |
| 3 | ಹೈಬ್ರಿಡ್ ಜೋಳ | 3180-00 |
| | ಬಿಳಿ ಜೋಳ (ಮಾಲ್ದಂಡಿ) | 3225-00 |
| 4 | ರಾಗಿ | 3846-00 |
| 5 | ಸಜ್ಜೆ | 2500-00 |
| 6 | ಉದ್ದು | 6950-00 |
| 7 | ಹೆಸರು | 8558-00 |
| 8 | ತೊಗರಿ | 7000-00 |
| 9 | ಶೇಂಗಾ (ಸಿಪ್ಪೆ ಸಹಿತ) | 6760-00 |
| 10 | ಸೂರ್ಯಕಾಂತಿ | 6400-00 |
| 11 | ಸೋಯಾಬೀನ್ (ಹಳದಿ) | 4600-00 |
| 12 | ಎಳ್ಳು | 8635-00 |
| 13 | ಹುಚ್ಚೆಳ್ಳು | 7734-00 |
| 14 | ಹತ್ತಿ- ಮೀಡಿಯಮ್ ಸ್ಟೇಪಲ್ ಲೆನ್ತ್ 24.5-25.5 ಮಿ.ಮೀ.<br>ಹತ್ತಿ- ಲಾಂಗ್ ಸ್ಟೇಪಲ್ ಲೆನ್ತ್ 29.5-30.5 ಮಿ.ಮೀ. | 6620-00<br>7020-00 |
| **ಹಿಂಗಾರು ಹಂಗಾಮಿನ ಬೆಳೆಗಳು:** | | |
| 1 | ಗೋಧಿ | 2275-00 |
| 2 | ಬಾರ್ಲಿ | 1850-00 |
| 3 | ಕಡಲೆ | 5440-00 |
| 4 | ಮಸೂರ | 6425-00 |
| 5 | ಸಾಸುವೆ | 5650-00 |
| 6 | ಕುಸುಬೆ | 5800-00 |

ಉಪ ಕೃಷಿ ನಿರ್ದೇಶಕರು
(ಕೃಷಿ ಬೆಲೆ ಆಯೋಗ)